ಹೇಳ್ಯಾರಂತ ಈ ಜನತಾ ದರ್ಶನ ಮಾಡಬೇಕಾಗ್ಯಾದ. ಇವರ ಯಾವಾಗ ಉದ್ದಾರ ಆತಾರಲೆ...' ಅಂದು ಕಣ್ಣಿಗೆ ಕೂಲಿಂಗ್ ಗ್ಲಾಸ್ ಹಾಕ್ಕೆಂಡ.

'ಹೊರಗ ಅಷ್ಟೊಂದು ಬಿಸಿಲು ಇಲ್ಲಪ್ಪೋ'

'ಇದು ಬಿಸಿಲಿಗೆ ಅಲ್ಲಲೇ... ಈ ಕಪ್ಪನೆಯ ಮುಖಕ್ಕಿಂತಲೂ ಚಾಳೀಸೆ ಎದ್ದು ಕಾಣಬೇಕಲೇ. ಆಗ ಜನ ಮುಖಕ್ಕಿಂತಲೂ ಚಾಳೀಸನ್ನ ನೋಡಿ ನಿಜವಾದ ಮುಖ ಮರಿತಾರಂತ. ಇದನ್ನ ಶಿವಪ್ಪಗೌಡರು ಮನ್ನೆ ಕೃಷಿ ಅಧ್ಯಯನಕ್ಕಂತ ಇಸ್ರೇಲ್‌ಗೆ ಹೋಗಿದ್ದರಲ್ಲಾ... ಆಗ ತಂದಾರ.'

'ಆದರೂ ವಿದೇಶಕ್ಕ ಹೋಗಾಕ ನಮ್ಮ ಕೇರಿ ಮಂದಿನ್ನ ಒಬ್ಬರನ್ನು ಸಲೆಕ್ಟ್ ಮಾಡಲಿಲ್ಲಪ'

'ಅದಕ್ಕ ನಿನಗ ಬುದ್ಧಿ ಇಲ್ಲ ಅನ್ನೋದು. ಹೊಲ ಇದ್ದೋರನಷ್ಟೇ ಕಳಿಸ್ತಾರ. ನಮ್ಮ ಕೇರ್ಯಾಗ ಹೊಲ ಯಾರದ್ದೈತಿ ಹೇಳು.'

'ಅದೆಪ್ಪ ಆ ಶಂಭಪ್ಪಗೌಡನ ಸೂಳೆ ಮಗ ಅಮರೇಶ ಇಲ್ಲನು. ಅವನಿಗೆ ಗೌಡರೆ ಒಂದೆಕರೆ ಹೊಲ ಕೊಟ್ಟಾರ. ಅವನ್ನ ಕಳಿಸಬಹುದಿತ್ತು. ಅವನು ಚುನಾವಣ್ಯಾಗ ಎಷ್ಟು ಓಡಾಡ್ಯಾನ. ನೀವೆ ನೋಡಿದ್ರಿ. ಹೋಗಲಿ ಅವನಿಗೊಂದು ಕೆಲಸಾನ ಕೊಡಸ್ರಿ.'

'ನಾ ಗೌಡರಿಗೆ ಹೇಳಿದನಲೇ. ಅವರು ಅವನ್ನ ಸುದ್ದಿ ತೆಗಿಬ್ಯಾಡಂತಾರ. ಅವನು ಏನಾದರ ಮುಂದುವರದರ ನನ್ನ ಆಸ್ತಿಗೆ ಕೈ ಹಾಕ್ತಾನ. ಈಗ ಕಾನೂನು ಬಾಳ ಸೂಕ್ಷ್ಮ ಆವ. ಈಗಲೇ ನಾನು ಶಂಭಪ್ಪಗೌಡನ ಮಗ ಅಂತ ಹೇಳಿಕಂಡು ಅಡ್ಡಾಡುತಾನ. ಮುಂದ ಬುಟ್ಟಾನನು. ಏನೋ ನಮ್ಮ ಮನೆತನದಾಗ ಮೊದಲಿಂದ ಬಸಿವಿ ಬಿಟ್ಟ ಕೇರಿ ಮಂದಿನ್ನ ಇಟುಗೊಳ್ಳೋದು ಪದ್ಧತಿ ಐತಿ ಇಟುಗಂಡೀನಿ. ಇಟುಗಂಡಮ್ಯಾಲ ಮಕ್ಕಳು ಹುಟ್ಟುಬೇಕಲಾ. ಅಂಗ ಅವನು. ಯಾವ ಸೂಳೆ ಯಾರ ಜತೆ ನಿಷ್ಠೆಯಿಂದ ಇರುತಾಳನು. ಈಗ ನೋಡಿದರ ಬಾಯಿಗಿ ಬಂದಂಗ ಮಾತಾಡಿದ್ರ ಹೆಂಗ. ಅವನಿಗೆ ಸ್ಕೋಪ್ ಕೊಡೋದು ಬ್ಯಾಡ. ಅವನ್ನ ಹೆಂಗಾರ ಮಾಡಿ ಕೇರಿ ಬುಡುಸಬೇಕಂತ ಹೇಳ್ಯಾರ' ಎಂದು ಸಿಟ್ಟುಗೊಂಡ.

'ಹೋಗಲಪಾ ಅವನ ತಂಗಿ ಮಲ್ಲವ್ವ ಐದಾಳಲ್ಲ. ನೋಡಾಕ ತೊಳದ ಚಂದ್ರಾಮ ಇದ್ದಾಂಗಾಳ. ಕಾಲು ಸ್ವಲ್ಪ ಸೊಟ್ಟಾದ. ಆಕಿದು ಡಿಗ್ರಿ ಆಗ್ಯಾದ. ಬಾಳ ಹುಷಾರಾಳಂತಪ. ಕಂಪ್ಯೂಟರ್, ಇಂಗ್ಲಿಷ್ ಬರ್ತಾದಂತ. ಆಕಿಗಾರ ನಿಮ್ಮ ಆಫೀಸಿನಾಗ ಹ್ಯಾಂಡಿಕ್ಯಾಪ್ಡ ಕೋಟದಾಗ ಒಂದು ಕೆಲಸ ಕೊಡಸರಿ. ಅವರಮ್ಮ ನಿನ್ನೆ ಬಂದು ಕಣ್ಣೀರು ಹಾಕಿ ಹೋಗ್ಯಾಳ.'

'ನನ್ನಂಗ ಮಗಳು ಆಗಾದು ಬ್ಯಾಡಪ್ಪ. ಹುಷಾರಾಳ ಏನಾರ ಒಂದು ನೌಕರಿ ಕೊಡಸರಿ. ಗೌಡರು ಈಗಂತೂ ಹಚಿಗವಲ್ಲರಪಾ. ಈಗೀಗ ಕೇರಿ ಕಡೆನು ಬರವಲ್ಲರು.' ಎಂದು ಕಳ್ಳು ಕಿತ್ತಿ ಬರಂಗ ಅತ್ತುಬಿಟ್ಟಳಪಾ. ನನಗ ಒಂದು ತರಾ ಆಯಿತು' ಎಂದ ದುರುಗಪ್ಪ ಸಾಹುಕಾರರ ಮುಖ ನೋಡಿದ.

ಮಂದಹಾಸದಿಂದ ಇದ್ದ ಮುಖ ತಕ್ಷಣಕ್ಕ ಗಂಭೀರವಾಗಿ ಸುಂದರನನ್ನು ದಿಟ್ಟಿಸಿ ನೋಡಿದರು. 'ಎಲ್ಲಾ ನನಗ ಗೊತ್ತದ. ನೀಯೇನು ಹೇಳೋದು ಬ್ಯಾಡ. ಆ ವಿಸ್ಕಿ ಬಾಟಲಿ ಒಳಗಿಡು. ಐವತ್ತು ಸಾವಿರ ಒಂದು ಬಾಟಲಿ. ಕೇರಳದಿಂದ ವರ್ಗಾವಣೆಯಾಗಿ ನಮ್ಮ ಜಿಲ್ಲಾಕ ಬಂದಾನಲಾ ಆ ಜಿಲ್ಲಾಧಿಕಾರಿ ರಂಜನ್ ಕೊಟ್ಟದ್ದು.'

'ಆ ತಾಯಿ ಮಗಳು ಹೊರಗ ಕುಂತಾರಪ. ಎಂಟು ದಿನದಿಂದ ಕಾಯಕತ್ತ್ಯಾರ. ಏನಾರ ಒಂದು ಹೇಳಿಕಳುಸೋದು ಒಳ್ಳೇದು' ಎಂದು ವಿಸ್ಕಿ ಬಾಟಲಿ ಒಳಗಿಟ್ಟ.

'ಅವರನ್ನ ನಾನು ನೋಡಿಕಂತೀನಿ. ಕಾರು ರೆಡಿ ಐತಿಲ್ಲೋ' ಎಂದು ಬೂಟು ಹಾಕಿಕೊಳ್ಳಬೇಕಂಬ ಮನಸ್ಸಿದ್ದರೂ ಗೌಡರ ಮನಿಗೆ ಹೋಗಬೇಕು ಅಗ ಬಿಚ್ಚೋದು ಸರಿಯಾಗುದಿಲ್ಲ ಎಂದು ಚಪ್ಪಲಿನೆ ಹಾಕಿಕೊಂಡ.

'ಸಾಹುಕಾರ ಕಾರಿನ್ಯಾಗ ಗೋಡಂಬಿ, ಬದಾಮಿ ಒಂದೊಂದು ಕೆ.ಜಿ. ಇಟ್ಟೇನಿ. ಡಿಕ್ಯಾಗ ಹತ್ತು ಎಳನೀರು ಹಾಕೀನಿ ಸಾಕಲಪ.'

'ಸಾಕು ಬುಡು. ನೀನು ಆ ಸೈಟ್ ಕಡೆ ಹೋಗಿರು. ಸಿಮೆಂಟ್, ಕಬ್ಬಿಣ, ಮರಳು, ಕಲ್ಲು ಎಷ್ಟು ಹಾಕಿ ಹೋಗ್ಯಾರ ನೋಡು. ನಾನು ಈ ಜನತಾ ದರ್ಶನ ಮುಗಿಸಿಗಂಡು ಗೌಡರ ಮನೆ ಕಡೆ ಹೋಗಿ ಬರ್ತೀನಿ' ಎಂದು ಹೊರಗ ಬಂದ.

ಜನ ಸಾಲುಗಟ್ಟಿ ನಿಂತಿದ್ದರು. ರುದ್ರೇಶ ಒಬ್ಬೊಬ್ಬರ ಸಮಸ್ಯೆಗಳನ್ನು ಬರೆದುಕೊಳ್ಳುತ್ತಿದ್ದ. ಮುದುಕ ಮುದುಕಿಯರೆ ಬಹಳಷ್ಟು ಜನ ಇದ್ದರು. 'ಯಪ್ಪಾ